# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯತಿಗಳಿಂದ ಆಹ್ವಾನಿಸಲಾಗುವ ಟೆಂಡರುಗಳಿಗೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಅನುಮೋದಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:13-01-2023 ರಂದು ನಡೆದ ಸಭೆಯ ನಡವಳಿಗಳು.

**ಪ್ರಸ್ತಾವನೆ:**

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಇ-ಸಂಗ್ರಹಣಾ ತಂತ್ರಾಂಶದಲ್ಲಿ ಟೆಂಡರ್ ಆಹ್ವಾನಿಸಲು ಡಿಜಿಟಲ್ ಕೀ ಹಾಗೂ ಯೂಸರ್ ಐಡಿ ನೀಡಲು, ಟೆಂಡರ್ ಪ್ರಕಟಣೆ, ಪರಿಶೀಲನೆ ಮತ್ತು ಅನುಮೋದನೆ ಇತ್ಯಾದಿ ಕಾರ್ಯಗಳಿಗೆ, ಅವರುಗಳ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಗಳ ಕುರಿತು ಮೇಲೆ ಓದಲಾದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಅದರಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದ ಗ್ರಾಮ ಪಂಚಾಯತಿಗಳಿಂದ ಆಹ್ವಾನಿಸಲಾಗುವ ಟೆಂಡರುಗಳಿಗೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಪರಿಶೀಲನಾ ಪ್ರಾಧಿಕಾರ, ಅನುಮೋದಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಿಸಲು, ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗ್ಗೆ ಈ ಕೆಳಕಂಡಂತೆ ನಿರ್ಧರಿಸಲಾಗಿರುತ್ತದೆ.

| ಕ್ರ.ಸಂ. | ಇ-ಸಂಗ್ರಹಣೆಯಲ್ಲಿ (e-Procurement) ನಿರ್ವಹಿಸಬೇಕಾದ ಕಾರ್ಯ | ಪ್ರಾಧಿಕಾರ |
|---|---|---|
| 1 | ಟೆಂಡರ್ ಆಹ್ವಾನಿಸುವ ಪ್ರಾಧಿಕಾರ (Tender Inviting Authority) | ಪಂಚಾಯತಿ ಅಭಿವೃದ್ಧಿ ಅಧಿಕಾರಿ |
| 2 | ಟೆಂಡರ್ ತೆರೆಯುವ ಪ್ರಾಧಿಕಾರ (Tender Opening Authority) | ಪಂಚಾಯತಿ ಅಭಿವೃದ್ಧಿ ಅಧಿಕಾರಿ |
| 3 | ಟೆಂಡರ್ ಮೌಲ್ಯಮಾಪನ ಪ್ರಾಧಿಕಾರ (Tender Evaluation Authority) | |
| A | ಕಾರ್ಯ ನಿರ್ವಹಿಸುವ ಅಧಿಕಾರಿಗಳು ಮತ್ತು ಅವರ ತಾಂತ್ರಿಕ ಪರಿಶೀಲನಾ ಮಿತಿ (Technical Bid Evaluation Authority) | 1. ಪಂಚಾಯತಿ ಅಭಿವೃದ್ಧಿ ಅಧಿಕಾರಿ -ಡಿಜಿಟಲ್ ಕೀ, ಕಿರಿಯ ಇಂಜಿನಿಯರ್/ಸಹಾಯಕ ಇಂಜಿನಿಯರ್ ಮತ್ತು ಲೆಕ್ಕಾಧಿಕಾರಿ (ತಾಲ್ಲೂಕು ಪಂಚಾಯತಿ) – ರೂ.25 ಲಕ್ಷಗಳವರೆಗೆ,<br><br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಜಿಲ್ಲಾ ಪಂಚಾಯತಿ) -ಡಿಜಿಟಲ್ ಕೀ, ಉಪ ಕಾರ್ಯದರ್ಶಿ (ಜಿಲ್ಲಾ ಪಂಚಾಯತಿ), ಮುಖ್ಯ ಲೆಕ್ಕಾಧಿಕಾರಿ (ಜಿಲ್ಲಾ ಪಂಚಾಯತಿ) ಕಾರ್ಯನಿರ್ವಾಹಕ ಇಂಜಿನಿಯರ್, ಕಾರ್ಯನಿರ್ವಾಹಕ ಅಧಿಕಾರಿ (ತಾಲ್ಲೂಕು ಪಂಚಾಯತಿ)- ರೂ.25.00 ಲಕ್ಷಕ್ಕೂ ಮೇಲ್ಪಟ್ಟು, |

| | | |
|---|---|---|
| B | ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಅವರ ಆರ್ಥಿಕ ಪರಿಶೀಲನಾ ಮಿತಿ (Financial Bid Evaluation Authority) | 1. ಪಂಚಾಯತಿ ಅಭಿವೃದ್ಧಿ ಅಧಿಕಾರಿ -ಡಿಜಿಟಲ್ ಕೀ, ಕಿರಿಯ ಇಂಜಿನಿಯರ್/ಸಹಾಯಕ ಇಂಜಿನಿಯರ್ ಮತ್ತು ಲೆಕ್ಕಾಧಿಕಾರಿ (ತಾಲ್ಲೂಕು ಪಂಚಾಯತಿ) – ರೂ.25.00ಲಕ್ಷಗಳವರೆಗೆ,<br><br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಜಿಲ್ಲಾ ಪಂಚಾಯತಿ) -ಡಿಜಿಟಲ್ ಕೀ, ಉಪ ಕಾರ್ಯದರ್ಶಿ (ಜಿಲ್ಲಾ ಪಂಚಾಯತಿ), ಮುಖ್ಯ ಲೆಕ್ಕಾಧಿಕಾರಿ (ಜಿಲ್ಲಾ ಪಂಚಾಯತಿ) ಕಾರ್ಯ ನಿರ್ವಾಹಕ ಇಂಜಿನಿಯರ್, ಕಾರ್ಯ ನಿರ್ವಾಹಕ ಅಧಿಕಾರಿ (ತಾಲ್ಲೂಕು ಪಂಚಾಯತಿ)- ರೂ.25.00 ಲಕ್ಷಕ್ಕೂ ಮೇಲ್ಪಟ್ಟು. |
| 4 | ಟೆಂಡರ್ ಅನುಮೋದಿಸುವ ಪ್ರಾಧಿಕಾರ (Tender Approval Authority) | 1. ಗ್ರಾಮ ಪಂಚಾಯತಿ (ಪಂಚಾಯತಿ ಅಭಿವೃದ್ಧಿ ಅಧಿಕಾರಿ-ಡಿಜಿಟಲ್ ಕೀ) – ರೂ.25 ಲಕ್ಷಗಳವರೆಗೆ.<br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, (ಜಿಲ್ಲಾ ಪಂಚಾಯತಿ)- ರೂ.25.00 ಲಕ್ಷಗಳ ಮೇಲ್ಪಟ್ಟು. |
| 5 | ಟೆಂಡರ್ ಅಪೀಲು ಪ್ರಾಧಿಕಾರ (Tender Appellate Authority) | 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, (ಜಿಲ್ಲಾ ಪಂಚಾಯತಿ) – ರೂ.25.00 ಲಕ್ಷಗಳವರೆಗೆ<br>2. ಆಯುಕ್ತರು (ಪಂಚಾಯತ್ ರಾಜ್)- ರೂ.1.00 ಕೋಟಿಗಳವರೆಗೆ.<br>2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ - ರೂ.1.00 ಕೋಟಿಗಳ ಮೇಲ್ಪಟ್ಟು. |

ಅದರಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧೀನದ ಗ್ರಾಮ ಪಂಚಾಯತಿಗಳಿಂದ ಆಹ್ವಾನಿಸಲಾಗುವ ಟೆಂಡರುಗಳಿಗೆ ಆಯಾ ಪ್ರಾಧಿಕಾರಗಳ ಆರ್ಥಿಕ ಮಿತಿಗಳ ಆಧಾರದಲ್ಲಿ ಆಹ್ವಾನಿಸುವ ಪ್ರಾಧಿಕಾರ, ಪರಿಶೀಲನಾ ಪ್ರಾಧಿಕಾರ, ಅನುಮೋದಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಿಸಲು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 178 ಗ್ರಾಪಂಅ 2023,ಬೆಂಗಳೂರು, ದಿನಾಂಕ:29-03-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧೀನದ ಗ್ರಾಮ ಪಂಚಾಯತಿಗಳಿಂದ ಆಹ್ವಾನಿಸಲಾಗುವ ಟೆಂಡರುಗಳಿಗೆ ಆಯಾ ಪ್ರಾಧಿಕಾರಗಳ ಆರ್ಥಿಕ ಮಿತಿಗಳ ಆಧಾರದಲ್ಲಿ ಆಹ್ವಾನಿಸುವ ಪ್ರಾಧಿಕಾರ, ಪರಿಶೀಲನಾ ಪ್ರಾಧಿಕಾರ, ಅನುಮೋದಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು ಈ ಕೆಳಕಂಡಂತೆ ನೇಮಿಸಿ ಆದೇಶಿಸಿದೆ.

| **ಕ್ರ. ಸಂ.** | **ಇ-ಸಂಗ್ರಹಣೆಯಲ್ಲಿ (e-Procurement) ನಿರ್ವಹಿಸಬೇಕಾದ ಕಾರ್ಯ** | **ಪ್ರಾಧಿಕಾರ** |
|---|---|---|
| 1 | ಟೆಂಡರ್ ಆಹ್ವಾನಿಸುವ ಪ್ರಾಧಿಕಾರ (Tender Inviting Authority) | ಪಂಚಾಯತಿ ಅಭಿವೃದ್ಧಿ ಅಧಿಕಾರಿ |
| 2 | ಟೆಂಡರ್ ತೆರೆಯುವ ಪ್ರಾಧಿಕಾರ (Tender Opening Authority) | ಪಂಚಾಯತಿ ಅಭಿವೃದ್ಧಿ ಅಧಿಕಾರಿ |

| | | |
|---|---|---|
| 3 | ಟೆಂಡರ್ ಮೌಲ್ಯಮಾಪನ ಪ್ರಾಧಿಕಾರ (Tender Evaluation Authority) | |
| A | ಕಾರ್ಯ ನಿರ್ವಹಿಸುವ ಅಧಿಕಾರಿಗಳು ಮತ್ತು ಅವರ ತಾಂತ್ರಿಕ ಪರಿಶೀಲನಾ ಮಿತಿ (Technical Bid Evaluation Authority) | 1. ಪಂಚಾಯತಿ ಅಭಿವೃದ್ಧಿ ಅಧಿಕಾರಿ - ಡಿಜಿಟಲ್ ಕೀ, ಕಿರಿಯ ಇಂಜಿನಿಯರ್/ಸಹಾಯಕ ಇಂಜಿನಿಯರ್ ಮತ್ತು ಲೆಕ್ಕಾಧಿಕಾರಿ (ತಾಲ್ಲೂಕು ಪಂಚಾಯತಿ) – ರೂ.25.00 ಲಕ್ಷಗಳವರೆಗೆ,<br><br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಜಿಲ್ಲಾ ಪಂಚಾಯತಿ) -ಡಿಜಿಟಲ್ ಕೀ, ಉಪ ಕಾರ್ಯದರ್ಶಿ (ಜಿಲ್ಲಾ ಪಂಚಾಯತಿ), ಮುಖ್ಯ ಲೆಕ್ಕಾಧಿಕಾರಿ (ಜಿಲ್ಲಾ ಪಂಚಾಯತಿ) ಕಾರ್ಯನಿರ್ವಾಹಕ ಇಂಜಿನಿಯರ್, ಕಾರ್ಯನಿರ್ವಾಹಕ ಅಧಿಕಾರಿ (ತಾಲ್ಲೂಕು ಪಂಚಾಯತಿ)- ರೂ.25.00 ಲಕ್ಷಕ್ಕೂ ಮೇಲ್ಪಟ್ಟು, |
| B | ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಅವರ ಆರ್ಥಿಕ ಪರಿಶೀಲನಾ ಮಿತಿ (Financial Bid Evaluation Authority) | 1. ಪಂಚಾಯತಿ ಅಭಿವೃದ್ಧಿ ಅಧಿಕಾರಿ - ಡಿಜಿಟಲ್ ಕೀ, ಕಿರಿಯ ಇಂಜಿನಿಯರ್/ಸಹಾಯಕ ಇಂಜಿನಿಯರ್ ಮತ್ತು ಲೆಕ್ಕಾಧಿಕಾರಿ (ತಾಲ್ಲೂಕು ಪಂಚಾಯತಿ) – ರೂ.25.00 ಲಕ್ಷಗಳವರೆಗೆ,<br><br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, (ಜಿಲ್ಲಾ ಪಂಚಾಯತಿ) -ಡಿಜಿಟಲ್ ಕೀ, ಉಪ ಕಾರ್ಯದರ್ಶಿ (ಜಿಲ್ಲಾ ಪಂಚಾಯತಿ), ಮುಖ್ಯ ಲೆಕ್ಕಾಧಿಕಾರಿ (ಜಿಲ್ಲಾ ಪಂಚಾಯತಿ) ಕಾರ್ಯ ನಿರ್ವಾಹಕ ಇಂಜಿನಿಯರ್, ಕಾರ್ಯ ನಿರ್ವಾಹಕ ಅಧಿಕಾರಿ (ತಾಲ್ಲೂಕು ಪಂಚಾಯತಿ)- ರೂ.25.00 ಲಕ್ಷಕ್ಕೂ ಮೇಲ್ಪಟ್ಟು, |
| 4 | ಟೆಂಡರ್ ಅನುಮೋದಿಸುವ ಪ್ರಾಧಿಕಾರ (Tender Approval Authority) | 1. ಗ್ರಾಮ ಪಂಚಾಯತಿ (ಪಂಚಾಯತಿ ಅಭಿವೃದ್ಧಿ ಅಧಿಕಾರಿ-ಡಿಜಿಟಲ್ ಕೀ) – ರೂ.25.00ಲಕ್ಷಗಳವರೆಗೆ.<br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಜಿಲ್ಲಾ ಪಂಚಾಯತಿ)- ರೂ.25.00 ಲಕ್ಷಗಳ ಮೇಲ್ಪಟ್ಟು. |
| 5 | ಟೆಂಡರ್ ಅಪೀಲು ಪ್ರಾಧಿಕಾರ (Tender Appellate Authority) | 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಜಿಲ್ಲಾ ಪಂಚಾಯತಿ) – ರೂ.25.00 ಲಕ್ಷಗಳವರೆಗೆ<br>2. ಆಯುಕ್ತರು (ಪಂಚಾಯತ್ ರಾಜ್)- ರೂ.1.00 ಕೋಟಿಗಳವರೆಗೆ.<br>2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ - ರೂ.1.00 ಕೋಟಿಗಳ ಮೇಲ್ಪಟ್ಟು. |

ಗ್ರಾಮ ಪಂಚಾಯತಿ ಮಟ್ಟದ ಟೆಂಡರ್ ಅನುಮೋದನೆಯನ್ನು ಗ್ರಾಮ ಪಂಚಾಯತಿ ಆಡಳಿತ ಮಂಡಳಿಯಿಂದ ಪಡೆದು, ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತಾಂತ್ರಿಕವಾಗಿ ಇ- ಸಂಗ್ರಹಣಾ

ತಂತ್ರಾಂಶದಲ್ಲಿ ಡಿಜಿಟಲ್ ಕೀ ಬಳಸಲು ಅನುಮತಿ ನೀಡಿದೆ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿ ಎಂಬುದಾಗಿ ಪದನಾಮೀಕರಿಸಿ ಆದೇಶಿಸಿದೆ.

ಮುಂದುವರೆದು, ಆಯಾ ಆರ್ಥಿಕ ಮಿತಿಗೊಳಪಟ್ಟು ಟೆಂಡರ್ ಆಹ್ವಾನಿಸುವಾಗ ಇ-ಸಂಗ್ರಹಣಾ ತಂತ್ರಾಂಶದಲ್ಲಿ ಟೆಂಡರ್ ಮೇಲ್ಮನವಿ ಅಧಿಕಾರಿಯನ್ನು ಆಯ್ಕೆ ಮಾಡಿ, ಟೆಂಡರುಗಳನ್ನು ಆಹ್ವಾನಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

27/3

(ಕೆ.ಆರ್. ರುದ್ರಪ್ಪ)
ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
27/3/23

**ಇವರಿಗೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
3. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಉಪ ಕಾರ್ಯದರ್ಶಿಗಳು.
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು.
7. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
8. ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯನಿರ್ವಾಹಕ ಅಭಿಯಂತರರುಗಳು.

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ).
3. ಯೋಜನಾ ನಿರ್ದೇಶಕರು, ಇ-ಸಂಗ್ರಹಣಾ ಕೋಶ- ಇ-ಸಂಗ್ರಹಣಾ ತಂತ್ರಾಂಶದಲ್ಲಿ ಸೂಕ್ತ ಬದಲಾವಣೆ ಮಾಡುವುದು.
4. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.